ಶ್ರೀ ಜೆ. ಎಚ್. ಪಟೀಲ್.—ಮಾನ್ಯ ಅಧ್ಯಕ್ಷರೆ, ಈಗಿನ ಪರಿಸ್ಥಿತಿಯಲ್ಲಿ ಅವರಿಗೆ ಬೇಕಾಗುವಷ್ಟು ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕೆ ಆಗುವುದಿಲ್ಲ. ರಾಜ್ಯದ ವಿದ್ಯುಚ್ಛಕ್ತಿಯ ಸಾಮರ್ಥ್ಯತೆಯನ್ನು ಲಕ್ಷದಲ್ಲಿಟ್ಟುಕೊಂಡರೆ ಅವರಿಗೆ ಬೇಕಾದಷ್ಟು ಕೊಡುವ ಸ್ಥಿತಿಯಲ್ಲಿಲ್ಲ. ಆದರೆ ಕಾರ್ಯಾನೆಯನ್ನು ಪಯಬಲ್ ಆಗಿ ನಡೆಸುವುದಕ್ಕೆ ಎಷ್ಟು ವಿದ್ಯುಚ್ಛಕ್ತಿ ಬೇಕು ಅಷ್ಟು ವಿದ್ಯುಚ್ಛಕ್ತಿಯನ್ನು ಕೊಡುತ್ತೇವೆ.

ಚಿಂಚೋಳಿ ತಾಲ್ಲೂಕಿನಲ್ಲಿ ಗ್ರಾಮಗಳ ವಿದ್ಯುದ್ದೀಕರಣದ ಬಗ್ಗೆ

೧೮೬೯. ಶ್ರೀ ಎಂ. ವೀರಯ್ಯಸ್ವಾಮಿ (ಚಿಂಚೋಳಿ).— ಮಾನ್ಯ ವಿದ್ಯುತ್ ಹಾಗೂ ತೋಟಗಾರಿಕಾ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚಿಂಚೋಳಿ ತಾಲ್ಲೂಕಿನಲ್ಲಿ ೧೯೮೮ನೇ ಮಾರ್ಚ್ ಮಾಹೆಯ ಅಂತ್ಯದವರೆಗೆ ಎಷ್ಟು ಗ್ರಾಮಗಳನ್ನು ಸರಕಾರದಿಂದ ವಿದ್ಯುದ್ದೀಕರಣ ಮಾಡಲಾಗಿದೆ.

ಆ) ವಿದ್ಯುತ್ ಸಂಪರ್ಕ ಹೊಂದದೆ ಇರುವ ಹಳ್ಳಿಗಳು ಹಾಗೂ ತಾಂಡಾಗಳ ಹೆಸರುಗಳೇನು ? (ವಿವರ ನೀಡುವುದು)

ಇ) ಇವುಗಳನ್ನು ಯಾವಾಗ ವಿದ್ಯುದ್ದೀಕರಣಗೊಳಿಸಲಾಗುವುದು ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಮಂತ್ರಿಗಳು).—

ಅ) ೧೩೧ ಕಂದಾಯ ಗ್ರಾಮಗಳು.

ಆ) ಈಗ ಈ ತಾಲ್ಲೂಕಿನಲ್ಲಿ ಜನವಾಸವಿರುವ ಎಲ್ಲಾ ಕಂದಾಯ ಗ್ರಾಮಗಳು ವಿದ್ಯುದ್ದೀಕರಣವಾಗಿದೆ. ವಿದ್ಯುದ್ದೀಕರಣಕ್ಕೆ ಮಂಜೂರಾತಿ ದೊರಕಿದ್ದು ಹಾಲಿ ವಿದ್ಯುದ್ದೀಕರಣ ವಾಗಬೇಕಾಗಿರುವ ೪೦ ತಾಂಡಾಗಳ ಹೆಸರನ್ನು ಅನುಬಂಧದಲ್ಲಿ ನೀಡಿದೆ (ತಾಂಡಾಗಳನ್ನು ಪರಿಶಿಷ್ಟ ವರ್ಗದವರ ಕಾಲೋನಿಗಳೆಂದು ಕರೆಯಲಾಗಿದೆ)

ಇ) ಇವುಗಳನ್ನು ೧೯೮೮-೮೯ನೇ ಸಾಲಿನಲ್ಲಿ ವಿದ್ಯುದ್ದೀಕರಣಗೊಳಿಸುವ ನಿರೀಕ್ಷೆ ಇದೆ.

ಅನುಬಂಧ

ಚಿಂಚೋಳಿ ತಾಲೂಕಿನಲ್ಲಿ ವಿದ್ಯುದ್ದೀಕರಣಕ್ಕೆ ಮಂಜೂರಾತಿ ದೊರಕಿದ್ದು ವಿದ್ಯುದ್ದೀಕರಣವಾಗಬೇಕಾಗಿರುವ ತಾಂಡಾ (ಪರಿಶಿಷ್ಟ ವರ್ಗದವರ ಕಾಲೋನಿ)ಗಳ ಹೆಸರು

ಕ್ರಮ ಸಂಖ್ಯೆ	ತಾಂಡಾದ ಹೆಸರು	ಗ್ರಾಮದ ಹೆಸರು
೧	ಧಂಗಿನಾಯಕನ ತಾಂಡ	ಮೋಘ್
೨	ರಮಾಚಂದ್ರ ನಾಯಕನ ತಾಂಡ	ಧುಟ್ಟರಗ
೩	ನಾಗೋ ಇದಲ್ಯೆ ಕಾಲೋನಿ	ಭುಸ್ಕೂರ್ (ಕೆ)
೪	ಹೊಸಹಳ್ಳಿ ಕಾಲೋನಿ	ಹೊಸಹಳ್ಳಿ
೫	ನಲಸಿಂಘ	ಜೆಲ್ವರ್ಗ
೬	ಜೆಲವರ್ಗ	ಜಲ್ವರ್ಗ
೭	ರಾಮಾಸಿಂಘ ನಾಯಕನ ತಾಂಡ	ಪೋಲಕಪಳ್ಳಿ
೮	ದುಂಡಿ ನಾಯಕನಪಾಳ್ಯ	ಸಾಸರಗೊಲ
೯	ಗೇಡಪನಿಡ	ಸಾಲೇಬೀರನಹಳ್ಳಿ

೧	೨	೩
೧೦	ಶಿವರಾಮು ನಾಯಾನ ತಾಂಡ	ಬೈಕಪಲ್ಲಿ
೧೧	ಜೀವಾರ ನಾಗೇರ	ಶಾದಿಪುರ
೧೨	ಜಪ್ಲಾನಾಯಕನ ತಾಂಡ	,,
೧೩	ಲಕ್ಕಾನಾಯಕನ ತಾಂಡ	,,
೧೪	ಬಿಂದುನಾಯಕ ತಾಂಡ	,,
೧೫	ಡಿಂಬುನಾಯಕ ತಾಂಡ	ಜೆ. ಸಂಸತಾಮ್
೧೬	ಹೀತನಾಯಕನ ತಾಂಡ	,,
೧೭	ಜಿಡ್ಡಾ ಕಾಲೋನಿ	ಸೇರಿ
೧೮	ಪೆದ್ದನಾಯಕನ ತಾಂಡ	ವೆಂಕಟಾಪುರ
೧೯	ಸುರುನಾಯಕನ ತಾಂಡ	ಚಿನ್ನಯ್ಯನ ಕರೆ
೨೦	ಐಚಾನಿ ತಾಂಡ	,,
೨೧	ಸರಸನಾಲರೋಡುಗಿ	,,
೨೨	ಜಂಟಿನಾಲ	ಚಿಂನ್ನ
೨೩	ಅಲಕಿ	ಚಿಕ್ಕನಹಳ್ಳಿ
೨೪	ಮಕ್ಕೋಕೆ	,,
೨೫	ರೊಹಿಲ	ಚಿಮ್ಮನಚೋಲೆ
೨೬	ಗಂಗಾ ನಾಯಕ ತಾಂಡ	,,
೨೭	ರಾಮಚಂದ್ರ ತಾಂಡ	,,
೨೮	ನೀಲಗಂಗಿ	,,
೨೯	ಗಾಂಧಿಗಡ ಹಳ್ಳಿ ತಾಂಡ	ಗಾಂಧಿಗಢಹಳ್ಳಿ
೩೦	ಲಕ್ಕಾನಾಯಕನ ತಾಂಡ	,,
೩೧	ಶಾಮನಾಯಕನ ತಾಂಡ	,,
೩೨	ಫತೆನಾಯಕನ ತಾಂಡ	,,
೩೩	ಹೇಮ್ಲಾ ನಾಯಕನ ತಾಂಡ	,,
೩೪	ಕಾಸಿಲಮ್ಮಾ ನಾಯಕನ ತಾಂಡ	,,
೩೫	ಕುಸ್ಕಂಳ್ಳಿಪ್ಪ	ಕುಸ್ಕಂಪಳ್ಳಿ
೩೬	ಧರ್ಮ ನಾಯಕನ ತಾಂಡ	ಖಾನಾಪುರ
೩೭	ದೊಪಗಾನುನಾಯಕನ ತಾಂಡ	,,
೩೮	ಚಟ್ಟಿಕರ	ಬಾನ್ಸೂರು
೩೯	ನಮ್ಲಾ ನಾಯಕನ ತಾಂಡ	,,
೪೦	ಪೈರೇಂಪೊಲ್ಲಿ	ಮಗ್ಗಂಪೂರ್

ಶ್ರೀ ಎಂ. ವೀರಯ್ಯಸ್ವಾಮಿ.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ನಾನು ಕೇಳಿದ ಪ್ರಶ್ನೆಗಳಿಗೆ ಏನು ಉತ್ತರವನ್ನು ಕೊಟ್ಟಿದ್ದಾರೆ, ಅದು ಪೂರ್ಣವಾಗಿ ಸತ್ಯಕ್ಕೆ ದೂರವಾದಂಥ ಉತ್ತರವಾಗಿದೆ. ಎರಡನೆಯದಾಗಿ ಜನವಾಸವಿರುವ ಎಲ್ಲಾ ಕಂದಾಯ ಗ್ರಾಮಗಳು ಪೂರ್ತಿಯಾಗಿ ವಿದ್ಯುದ್ದೀಕರಣವಾಗಿವೆ ಎಂದು ಹೇಳಿದ್ದಾರೆ. ಎಲವಳ್ಳಿ ಎಂಬ ಗ್ರಾಮದಲ್ಲಿ ಸುಮಾರು ೧೫೦೦ ಕ್ಕಿಂತ ಹೆಚ್ಚಿಗೆ ಜನಸಂಖ್ಯೆ ಇರಬಹುದು. ಅದಕ್ಕೆ ಇನ್ನೂ ವಿದ್ಯುದೀಕರಣ ಆಗಿಲ್ಲ. ಮಾನ್ಯ ಸಚಿವರು ಏನು ೪೦ ತಾಂಡಾಗಳ ಹೆಸರನ್ನು ಅನುಬಂಧದಲ್ಲಿ ಕೊಟ್ಟಿದ್ದಾರೆ, ಅದರಲ್ಲಿ ಕೆಲವು ವಿದ್ಯುದ್ದೀಕರಿಸಲ್ಪಟ್ಟಿವೆ. ಮತ್ತೆ ಕೆಲವು ಹೆಸರುಗಳು ನಮ್ಮ ತಾಲ್ಲೂಕಿನಲ್ಲಿ ಇಲ್ಲವೇ ಇಲ್ಲ. ಇದಕ್ಕೆ ಏನು ಉತ್ತರವನ್ನು ಕೊಡುತ್ತೀರಿ ?

ಶ್ರೀ ಲಕ್ಷ್ಮೀನರಸಿಂಹಯ್ಯ.— ಕೆಲವು ಸಾರಿ ಹೀಗೆ ಆಗುತ್ತದೆ. ಕಳೆದ ಸಾರಿ ಮಾನ್ಯ ಬಿ. ಆರ್. ನೀಲಕಂಠಪ್ಪನವರು ಕೂಡ ಇಂತಹದ್ದೇ ವಿಚಾರವನ್ನು ಹೇಳಿದ್ದರು. ಆ ಮೇಲೆ ವಿಮರ್ಶೆಗೆ ಒಳಪಡಿಸಿದಾಗ ವಿಚಾರ ಏನೆಂಬುದು ತಿಳಿಯಲಾಯಿತು. ಈಗ ನಾನು ನನಗೆ ಸಿಕ್ಕಿರುವ ಮಾಹಿತಿ ಪ್ರಕಾರ ಈ ತಾಲ್ಲೂಕಿನಲ್ಲಿ ಬರತಕ್ಕಂಥಾದ್ದನ್ನು ಹೇಳಿದ್ದೇನೆ. ಒಂದು ವೇಳೆ ಮಾನ್ಯ ಸದಸ್ಯರು ಹೇಳುವ ರೀತಿಯಲ್ಲಿ ಆ ಹಳ್ಳಿಗಳು ಆ ತಾಲ್ಲೂಕಿನಲ್ಲಿ ಇಲ್ಲದಿದ್ದರೆ ಅವುಗಳನ್ನು ಕೈಬಿಟ್ಟು ಇರುವಂಥ ಹಳ್ಳಿಗಳಿಗೆ ವಿದ್ಯುದ್ದೀಕರಣ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇನ್ನು ಎಲಪೂಳ ಗ್ರಾಮದ ವಿಚಾರ ಹೇಳಿದ್ದಾರೆ. ಅದು ಕಂದಾಯ ಗ್ರಾಮ. ಆದರೆ ಮುಳ್ಳಾಮಾರಿ ಕೆಳದಂಡೆ ಯೋಜನೆಯಡಿಯಲ್ಲಿ ಆ ಹಳ್ಳಿಯೂ ಮುಳುಗಡೆ ಆಗುತ್ತದೆ ಎಂಬ ದೃಷ್ಟಿಯಿಂದ ಮುಳುಗಡೆಯಾಗತಕ್ಕಂಥ ಗ್ರಾಮಗಳಿಗೆ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಮಾಡಿದರೆ ಅದು ವೇಸ್ಟ್ ಆಗುತ್ತದೆ ಎಂದು ಕೈಬಿಡಲಾಗಿದೆ. ನೀವು ಹೇಳಿದ ಪ್ರಕಾರ ಅದು ಜನಗಣತಿ ಗ್ರಾಮವಾಗಿದೆ.

ಶ್ರೀ ಎಂ. ವೀರಯ್ಯಸ್ವಾಮಿ.— ಆ ಗ್ರಾಮಗಳು ಮುಳುಗಡೆಯೂ ಆಗುವುದಿಲ್ಲ, ಯಾವುದೇ ಅಭಿವೃದ್ಧಿಯೂ ಆಗುವುದಿಲ್ಲ. ನಿನ್ನೆ ತಾನು ಈ ಸದನದಲ್ಲಿ ಕೇಳಿದ ಪ್ರಶ್ನೆಗೆ ಮಾನ್ಯ ಸಚಿವರು ಮುಳ್ಳಾಮಾರಿ ಪ್ರಾಜೆಕ್ಟ್‌ನ್ನು ೨೦೦೦ನೇ ಎ.ಡಿ.ಗೊಳಗೆ ಮುಗಿಸುವ ಯತ್ನದಲ್ಲಿದ್ದೇವೆ ಎಂದು ಹೇಳಿದ್ದಾರೆ. ಅಂದರೆ ಅಲ್ಲಿಯವರೆಗೆ ಈ ಗ್ರಾಮಗಳು ಹಾಗೆಯೇ ಇರಬೇಕೇ ? ೧೯೭೨ರಲ್ಲಿ ಈ ಪ್ರಾಜೆಕ್ಟ್‌ನ ಕೆಲಸ ಪ್ರಾರಂಭವಾಗಿದೆ, ಅಲ್ಲಿಂದ ಇಲ್ಲಿಯವರೆಗೆ ಆ ಗ್ರಾಮಗಳಿಗೆ ವಿದ್ಯುತ್ ಸೌಕರ್ಯ ಕೊಟ್ಟಿಲ್ಲ. ಹಾಗಾದರೆ ಅವರು ಇನ್ನೂ ೧೨ ವರ್ಷಗಳವರೆಗೆ ಎಲ್ಲಾ ಸೌಲಭ್ಯಗಳಿಂದ ವಂಚಿತರಾಗಿ ಇರಬೇಕೇ ? ಆದುದರಿಂದ ಮುಳುಗಡೆಯಾಗುವವರಿಗೆ ಅವರಿಗೆ ವಿದ್ಯುತ್ ಸೌಲಭ್ಯವನ್ನು ಕೊಡಬೇಕೆಂದು ಒತ್ತಾಯ ಮಾಡುತ್ತೇನೆ. ಕೆ.ಇ.ಬಿ.ಯವರಿಂದ ಎಸ್ಟಿಮೇಟ್ ಮಂಜೂರು ಆಗಿದೆ. ಈಗ ತಮ್ಮ ಕಡೆಯಿಂದ ಆದೇಶ ಮಾತ್ರ ಬೇಕೆಂದು ಕಾಣುತ್ತದೆ. ಈಗ ಲಿಸ್ಟ್‌ನಲ್ಲಿ ಕೊಟ್ಟ ಹೆಸರುಗಳು ಜಗತ್ತಿನಲ್ಲಿ ಎಲ್ಲಿಯೂ ಇಲ್ಲ. ಮುಳುಗಡೆ ಆಗುವ ಪ್ರದೇಶಗಳಿಗೆ ವಿದ್ಯುತ್ ಕೊಡುವುದಿಲ್ಲ ಎಂದಾದರೆ ಬೆಣ್ಣೆತೊರೆ ಯೋಜನೆಯಡಿಯಲ್ಲಿ ಮುಳುಗಡೆಯಾಗುವ ಹೆರಾರು, ಕಾಮಕನಾತಾ ಎಂಬ ಹಳ್ಳಿಗಳಿಗೆ ಹೇಗೆ ಕೊಟ್ಟಿರಿ ? ಆಮೇಲೆ, ಮುಳುಗಡೆಯಾಗುವುದು ಇನ್ನು ೨೦ ವರ್ಷಗಳ ನಂತರ ಎನ್ನುವುದಾದರೆ ಅಲ್ಲಿಯವರೆಗೆ ಆ ಹಳ್ಳಿಯವರೆಲ್ಲ ಅಂಧಕಾರದಲ್ಲಿರಬೇಕೇ ?

ಶ್ರೀ ಲಕ್ಷ್ಮೀನರಸಿಂಹಯ್ಯ.— ಈಗ ಇರುವ ನಿಯಮಾವಳಿ ಪ್ರಕಾರ ಹಾಗೆ ಮಾಡಲು ಬರುವುದಿಲ್ಲ. ನಿಜವಾಗಿಯೂ ಎಲ್ಲಿ ಹತ್ತಾರು ವರ್ಷಗಳು ತಡವಾಗುವುದೋ ಅಂಥಾ ಕಡೆ ವಿದ್ಯುತ್ತನ್ನು ಒದಗಿಸೋಣ.

ಪುನರ್ ವಸತಿ ಪ್ರದೇಶಕ್ಕೆ ವಿದ್ಯುತ್ ಸರಬರಾಜು

೧೯೭೭. ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ ವಿದ್ಯುತ್ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಿವಮೊಗ್ಗ ತಾಲ್ಲೂಕು ಶೆಟ್ಟಿಹಳ್ಳಿ ಮುಳುಗಡೆ ನಿರಾಶ್ರಿತರ ಪುನರ್‌ವಸತಿ ಪ್ರದೇಶಕ್ಕೆ ವಿದ್ಯುಚ್ಛಕ್ತಿ ಒದಗಿಸಲು ಪರವಾನಿಗೆ ಕೇಲಾಗಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಶೆಟ್ಟಿಹಳ್ಳಿಗೆ ವಿದ್ಯುತ್ ತಂತಿ ಎಳೆಯಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಮಂತ್ರಿಗಳು).—

ಅ) ನಿಜ.

ಆ) ೧೦ ಕಿ. ಮೀ. ಉದ್ದದ ತಂತಿಯನ್ನು ಎಳೆಯಬೇಕಾಗಿದೆ. ಇದರಲ್ಲಿ ೪ ಕಿ. ಮೀ. ಲೈನ್ ಅರಣ್ಯದಲ್ಲಿ ಹಾದು ಹೋಗುತ್ತದೆ. ಈಗ ೬ ಕಿ. ಮೀ. ಉದ್ದದ ಪ್ರದೇಶಕ್ಕೆ ಕಂಬಗಳನ್ನು